ಇ. ಚರಂಡಿ ಕಾಮಗಾರಿಗಳು	3.79
ಈ. ರೆಸಿಡೆನ್ಸಿಯಲ್ ಲೇ ಔಟ್	41.54
ಒಟ್ಟು	92.33
3. ಕಾರವಾರ ನಗರಸಭೆ	
ಅ. ಮಾರುಕಟ್ಟೆ ನಿರ್ಮಾಣ ಕಾಮಗಾರಿ	31.50
ಆ. ರಸ್ತೆ ನಿರ್ಮಾಣ	7.16
ಇ. ಬೀದಿ ದೀಪ ಕಾಮಗಾರಿ	7.82
ಒಟ್ಟು	45.48

ಇದಲ್ಲದೇ ರೂ.52.00 ಲಕ್ಷಗಳ ವೆಚ್ಚದಲ್ಲಿ 2 ಮಾರುಕಟ್ಟೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

4. ಹಳಿಯಾಳ ಪಟ್ಟಣ ಪಂಚಾಯಿತಿ	
ಅ. ಮಾರುಕಟ್ಟೆ ನಿರ್ಮಾಣ ಕಾಮಗಾರಿ	0.34
ಆ. ರಸ್ತೆ ನಿರ್ಮಾಣ	19.63
ಒಟ್ಟು	19.97

5. ಯಲ್ಲಾಪುರ, ಹೊನ್ನಾವರ ಮತ್ತು ಅಂಕೋಲಾ ಪಟ್ಟಣಗಳಿಗೆ ದಿ. 18.2.2005 ರಂದು ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಾರಂಭಗೊಳ್ಳುವ ಹಂತದಲ್ಲಿರುತ್ತದೆ. ಕುಮಟಾ ಪಟ್ಟಣದ ವರಿದಯು ಫೆಬ್ರವರಿ 2005ರಲ್ಲಿ ಮಂಜೂರಾಗಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಲು ಬಾಕಿ ಇರುತ್ತದೆ.

ಮುಂಡಗೋಡ ಮತ್ತು ಸಿದ್ದಾಪುರ ಪಟ್ಟಣಗಳ ಯೋಜನಾ ವರದಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಬೇಕಾಗಿರುತ್ತದೆ.

ಇ. ಕಾಮಗಾರಿವಾರು ಖರ್ಚಾಗಿರುವ ಮೊತ್ತವನ್ನು ಮೇಲೆ ವಿವರಿಸಿದೆ.

ಈ. ಈ ಸಾಲಿನಲ್ಲಿ ಯಲ್ಲಾಪುರ, ಅಂಕೋಲಾ ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

1662(2167) ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬರಗಾಲದ ಬಗ್ಗೆ ಮಾಹಿತಿಯನ್ನು ಒದಗಿಸುವ ದಿಸೆಯಲ್ಲಿ ಬರ ಪರಿಹಾರ ಉಸ್ತುವಾರಿ ಕೋಶವು ಕೈಗೊಂಡ ಕ್ರಮಗಳೇನು;

ಆ. ಮಳೆಯ ಮಾಹಿತಿಯನ್ನು ಪಡೆಯಲು ಟೆಲಿಮೆಟ್ರಿಕ್ ಮಳೆ ಮಾಪನ ಉಪಕರಣವನ್ನು ಬರ ಪರಿಹಾರ ಉಸ್ತುವಾರಿ ಕೋಶವು ಅಭಿವೃದ್ದಿ ಪಡಿಸಿದೆಯೇ;

ಇ. ಹಾಗಿದ್ದಲ್ಲಿ, ಅದನ್ನು ಅಳವಡಿಸಿರುವುದು ಎಲ್ಲಿ (ವಿವರ ನೀಡಿ) :

ಈ. ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು :

ಉ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಮಳೆ ಮಾಪಕ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಊ. ಇದಕ್ಕೆ ಉಸ್ತುವಾರಿ ಕೋಶದಿಂದ ಪ್ರಸ್ತಾವನೆ ಬಂದಿದೆಯೇ;

ಋ. ಇದಕ್ಕೆ ತಗಲುವ ವೆಚ್ಚವೆಷ್ಟು ;

ಱ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಎ. ಭೂಕಂಪ ಹಾಗೂ ಬಿರುಗಾಳಿ, ಚಂಡಮಾರುತ, ಭೂ ವೈಪರೀತ್ಯಗಳ ಹವಾಮಾನ ಸಮೀಕ್ಷೆಗೆ ಜಿಲ್ಲಾವಾರು ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬಸವರಾಜ್.ಎಸ್. ಹೊರಟ್ಟಿ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು) ;

ಅ. 1) ಮಳೆಯ ಬಗ್ಗೆ ಮುನ್ಸೂಚನೆ ನೀಡಲಾಗುತ್ತಿದೆ.

2) ಬರಕ್ಕೆ ತುತ್ತಾದ ಪ್ರದೇಶಗಳನ್ನು ಸಕಾಲಕ್ಕೆ ಗುರುತಿಸಿ ಸರ್ಕಾರಕ್ಕೆ ವರದಿ ಮಾಡಲಾಗುತ್ತಿದೆ.

3) ಬರ ನಿರ್ವಹಣೆಯಲ್ಲಿ ಬೇಕಾದ ವೈಜ್ಞಾನಿಕ ಮಾಹಿತಿಗಳನ್ನು ಅಲ್ಪಕಾಲಿಕ ಮತ್ತು ಧೀರ್ಘಕಾಲಿಕ ಕಾರ್ಯಕ್ರಮಗಳ ಬಗ್ಗೆ ಒದಗಿಸಲಾಗುತ್ತಿದೆ.

ಆ. ಹೌದು. ಸಮೂಹ ಮತ್ತು ಸ್ಟಟಿಕ ಎಂಬ ಎನ್. ಜಿ. ಓಗಳ ಜೊತೆ ಅಭಿವೃದ್ದಿ ಪಡಿಸಲಾಗಿದೆ.

ಇ. ಇನ್ನೂ ಅಳವಡಿಸಿರುವುದಿಲ್ಲ.

ಈ. 16,000–00 ರೂ.ಗಳು

ಉ. ಇದೆ.

ಊ. ರಾಜ್ಯ ಮಟ್ಟದ ಹವಾಮಾನ ಕಾವಲು ಸಮಿತಿಗೆ ಸಲ್ಲಿಸಲಾಗಿದೆ.

ಋ. 10.00 ಕೋಟಿ ರೂ.ಗಳು

ಱ. ರಾಜ್ಯ ಮಟ್ಟದ ಹವಾಮಾನ ಕಾವಲು ಸಮಿತಿಯಿಂದ ಸ್ವೀಕರಿಸಿದ ನಂತರ ಸರ್ಕಾರವು ಪರಿಶೀಲಿಸಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಎ. ಜಿಲ್ಲಾವಾರು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿರುವುದಿಲ್ಲ. ಆದರೆ ರಾಷ್ಟ್ರೀಯ ಚಂಡಮಾರುತ ಉಪಶಮನ ಯೋಜನೆಯಲ್ಲಿ ಕರ್ನಾಟಕ ರಾಜ್ಯವು ಸೇರಿರುತ್ತದೆ. ಹಾಗೂ ರಾಜ್ಯದಲ್ಲಿ 19 ಭೂಕಂಪನ ಮಾಪನ ಕೇಂದ್ರಗಳನ್ನು ಮತ್ತು 4 ಡ್ರಾಪ್‌ಲರ್ ರಾಡಾರ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

1663 (2160) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ಶ್ರೀ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ. ರಾಮದುರ್ಗದ (ಎಂ.ಎಲ್.ಬಿ.ಸಿ) ವಿಭಾಗದ ಕಾಮಗಾರಿಗಳನ್ನು ನರಗುಂದ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆಯೇ;

ಆ. ಈಗಾಗಲೇ ನರಗುಂದ ಎಂ.ಆರ್.ಬಿ.ಸಿ.ಗೆ 46 ಸಾವಿರ ಹೆಕ್ಟೇರು ಪ್ರದೇಶವನ್ನು ಸೇರ್ಪಡಿಸಿರುವುದು ನಿಜವೆ ;

ಇ. ನಿಜವಾಗಿದ್ದರೆ ಇದನ್ನು ರಾಮದುರ್ಗ ವಿಭಾಗಕ್ಕೆ ಸೇರ್ಪಡಿಸುವುದರ ಮೂಲಕ ಈ ತಾಲ್ಲೂಕಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲಾಗುವುದೆ?